## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಟ್ಟಡಗಳ ಮೇಲ್ಛಾವಣಿ ಮೇಲೆ ಗ್ರಿಡ್ ಸಂಪರ್ಕಿತ ಸೌರಶಕ್ತಿ ಉತ್ಪಾದನಾ ಘಟಕಗಳಿಗೆ ಮಾನದಂಡನೆಗಳು.

ಓದಲಾಗಿದೆ:

1. ಸೌರ ನೀತಿ 2014-21 ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ:22.05.2014.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಇಎನ್ 70 ವಿಎಸ್‌ಸಿ 2015 ದಿನಾಂಕ:10.12.2015.
3. ಜಂಟಿ ಕಾರ್ಯದರ್ಶಿ, ಎಂ.ಎನ್.ಆರ್.ಇ. ರವರ ಪತ್ರ ಸಂಖ್ಯೆ: 11/1/2016-EFM ದಿನಾಂಕ:16.02.2016.
4. ಕಾರ್ಯದರ್ಶಿಗಳು, ಕೆ.ಇ.ಆರ್.ಸಿ.ರವರ ಪತ್ರ ಸಂಖ್ಯೆ:ಕೆಇಆರ್‌ಸಿ/ಎಸ್/ಎಫ್31/ವಾಲ್ಯೂಮ್-13(ಬಿ)/15-16/2434 ದಿನಾಂಕ:17.03.2016.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 70 ವಿಎಸ್‌ಸಿ 2015 ದಿನಾಂಕ:22.03.2016.

********

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಸೌರ ನೀತಿ 2014-21ರನ್ವಯ 2014 ರಿಂದ 2018ರ ಅವಧಿಯಲ್ಲಿ 400 ಮೆ.ವ್ಯಾ. ಸಾಮರ್ಥ್ಯದ ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳನ್ನು ವಿದ್ಯುತ್ ಗ್ರಾಹಕರ ಛಾವಣಿಗಳ ಮೇಲೆ ಅಳವಡಿಸಲು ಗುರಿ ನಿಗದಿಪಡಿಸಿರುತ್ತದೆ.

ಮೇಲ್ಛಾವಣಿ ಸೌರ ಘಟಕಗಳನ್ನು ಅಳವಡಿಸುವ ವರ್ಗದಡಿಯಲ್ಲಿ ವಿದ್ಯುತ್ ಗ್ರಾಹಕರು ಆಸಕ್ತಿ ತೋರಿಸದೇ ಇದ್ದುದರಿಂದ ಸರ್ಕಾರವು ಮೇಲೆ ಓದಲಾದ (2)ರ ಸುತ್ತೋಲೆಯಂತೆ ಹೊಸ ಕಟ್ಟಡಗಳ ನಿರ್ಮಾಣ ಹಂತದಲ್ಲಿಯೇ ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿ ಅದಕ್ಕೆ ಬೇಕಾದ ಕೆಲವು ಮಾನದಂಡನೆಗಳನ್ನು ನಿಗದಿಪಡಿಸಲಾಗಿತ್ತು.

ಮೇಲೆ ಓದಲಾದ(3)ರಲ್ಲಿ ಎಂ.ಎನ್.ಆರ್.ಇ ಯು ಸೌರ ವಿದ್ಯುತ್ ಖರೀದಿಯ ಅನಿವಾರ್ಯತೆಯ ಗುರಿಯನ್ನು ಶೇ.8%ಕ್ಕೆ ಹೆಚ್ಚಿಸಿ ಪರಿಷ್ಕರಿಸಿರುತ್ತದೆ. ಎಂ.ಎನ್.ಆರ್.ಇ ಯು ಸೌರ ವಿದ್ಯುತ್ ಅನಿವಾರ್ಯತೆಯ ಗುರಿಯನ್ನು ಪರಿಷ್ಕರಿಸಿರುವುದರಿಂದ ಮೇಲೆ ಓದಲಾದ (1)ರ ಸೌರ ನೀತಿಯಲ್ಲಿ ನಿಗದಿಪಡಿಸಿರುವ ಸೌರ ವಿದ್ಯುತ್ ಖರೀದಿ ಸಾಮರ್ಥ್ಯವನ್ನು ಮರು ಪರಿಷ್ಕರಿಸುವ ಅವಶ್ಯಕತೆಯಿರುತ್ತದೆ.

ಮೇಲೆ ಓದಲಾದ (4) ರ ಪತ್ರದಲ್ಲಿ ಕಾರ್ಯದರ್ಶಿಗಳು, ಕೆ.ಇ.ಆರ್.ಸಿ. ರವರು ಸರ್ಕಾರದ ಸೌರ ನೀತಿಯಂತೆ ಹಾಗೂ ಮೇಲೆ ಓದಲಾದ (2)ರ ಸುತ್ತೋಲೆ ಅನ್ವಯ ಈಗಾಗಲೇ ವಿದ್ಯುತ್ ವಿತರಣಾ ಕಂಪನಿಗಳು ಅವರ ಹಂತದಲ್ಲಿಯೇ 5.92 ಮೆ.ವ್ಯಾ. ಸಾಮರ್ಥ್ಯದ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳಿಗೆ ಒಡಂಬಡಿಕೆ ಮಾಡಿಕೊಂಡು ಅನುಷ್ಠಾನಗೊಳಿಸಲಾಗಿದ್ದು, 343.7 ಮೆ.ವ್ಯಾ. ಸಾಮರ್ಥ್ಯದ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳಿಗೆ ಕೆ.ಇ.ಆರ್.ಸಿ.ಯಿಂದ ಅನುಮೋದನೆ ಪಡೆದುಕೊಂಡಿರುತ್ತವೆ ಅಲ್ಲದೇ ಇನ್ನೂ 186 ಮೆ.ವ್ಯಾ. ಸಾಮರ್ಥ್ಯದ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಆಯೋಗದ ಅನುಮೋದನೆಯನ್ನು ಕೋರಿರುತ್ತಾರೆ. ಆದರೆ ಸರ್ಕಾರವು ಸದರಿ ಗುರಿಯನ್ನು ಮಾರ್ಪಡಿಸದೇ ಇರುವುದರಿಂದ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಇನ್ನಾವುದೇ ಒಡಂಬಡಿಕೆಗಳನ್ನು ಮಾಡಿಕೊಳ್ಳದಿರಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಆದೇಶ ನೀಡಬೇಕೆಂದು ಸಲಹೆ ಮಾಡಿರುತ್ತಾರೆ.

GM(T)

For urgent placing on web site & Mail to all CEE/SEE/EEs/AEEs

28/3

ಮೇಲಿನ ಪ್ರಸ್ತಾವನೆಗಳನ್ನು ಪರಿಶೀಲಿಸುವ ಸಲುವಾಗಿ ವಿದ್ಯುತ್ ಸರಬರಾಜು ಕಂಪನಿಗಳಿಂದ ವಾಸ್ತವ ಅಂಕಿ ಅಂಶಗಳನ್ನು ಪಡೆಯಲಾಗಿ ಅವರು ಒದಗಿಸಿರುವ ಮಾಹಿತಿಯನ್ವಯ, ವಿದ್ಯುತ್ ಸರಬರಾಜು ಕಂಪನಿಗಳು ಈ ವರೆಗೆ ಸುಮಾರು 1567 ಮೆ.ವ್ಯಾ. ಸಾಮರ್ಥ್ಯದ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳ ಒಡಂಬಡಿಕೆ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ.

ಪ್ರಸ್ತುತ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳಿಗೆ ಸ್ವೀಕರಿಸಿರುವ ಅರ್ಜಿಗಳ ಒಟ್ಟು ಸಾಮರ್ಥ್ಯವು ಸೌರ ನೀತಿಯಲ್ಲಿ ನಿಗದಿಪಡಿಸಲಾದ ಗುರಿಯನ್ನು ಮೀರಿ ಹೆಚ್ಚಿನ ಸಾಮರ್ಥ್ಯಕ್ಕೆ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಬಹುತೇಕ ಅರ್ಜಿದಾರರು ತಮ್ಮ ಸ್ಥಾವರಕ್ಕೆ ವಿದ್ಯುತ್ ಸರಬರಾಜು ಕಂಪನಿಗಳಿಂದ, ವಿದ್ಯುತ್ ಮಂಜೂರಾತಿ(sanctioned load) ಯಾಗಿರುವ ಹೊರೆಗಿಂತ ಹೆಚ್ಚು ಸಾಮರ್ಥ್ಯಕ್ಕೆ ಅರ್ಜಿಗಳನ್ನು ಸಲ್ಲಿಸಿರುವುದು ಗಮನಿಸಲಾಗಿದೆ.

ಆದರೆ ಸೌರ ನೀತಿಯಲ್ಲಿ ನಿಗದಿಪಡಿಸಿರುವ ಗುರಿಯನ್ನು ಮೀರಿರುವುದರಿಂದ ಮೇಲ್ಛಾವಣಿ ಸೌರ ಘಟಕಗಳ ನೊಂದಣಿಯನ್ನು ಸ್ಥಗಿತಗೊಳಿಸುವಂತೆ ಕೆ.ಇ.ಆರ್.ಸಿ ಯು ಸೂಚಿಸಿದ್ದರೂ ಸಹ ಎಂ.ಎನ್.ಆರ್.ಇ ಯು ಸೌರ ವಿದ್ಯುತ್ ಖರೀದಿಯ ಅನಿವಾರ್ಯತೆಯ ಗುರಿಯನ್ನು ಹೆಚ್ಚಿಸಿ ಪರಿಷ್ಕರಿಸಿರುವುದರಿಂದ ಹಾಗೂ ಮೇಲ್ಛಾವಣಿ ಸೌರ ಘಟಕಗಳ ನಿರ್ಮಾಣಕ್ಕೆ ಗ್ರಾಹಕರು ಹೆಚ್ಚಿನ ಆಸಕ್ತಿ ತೋರುತ್ತಿರುವುದರಿಂದ ಮೇಲ್ಛಾವಣಿ ಸೌರ ಘಟಕಗಳಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಮತ್ತು ವಿದ್ಯುತ್ ಜಾಲದ ಸುರಕ್ಷತೆಯನ್ನು ಸಹ ಗಮನದಲ್ಲಿಟ್ಟುಕೊಂಡು, ವಿದ್ಯುತ್ ಸಂಪರ್ಕ ಹೊಂದಿರುವ ಕಟ್ಟಡಗಳಿಗೆ ಕೆಲವು ಮಾರ್ಗಸೂಚಿಗಳನ್ನು ರೂಪಿಸಿ ಈ ಯೋಜನೆಯನ್ನು ಮುಂದುವರೆಸಲು ಸರ್ಕಾರ ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸುತ್ತದೆ:

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 70 ವಿಎಸ್‌ಸಿ 2015,**

**ಬೆಂಗಳೂರು, ದಿನಾಂಕ: 28.03.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸೌರ ನೀತಿ 2014–21 ರನ್ವಯ, ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಗುರಿಯನ್ನು ಈಗಾಗಲೇ ತಲುಪಿದ್ದರೂ ಸಹ ಎಂ.ಎನ್.ಆರ್.ಇ ಯು ಸೌರ ವಿದ್ಯುತ್ ಖರೀದಿಯ ಅನಿವಾರ್ಯತೆಯ ಗುರಿಯನ್ನು ಹೆಚ್ಚಿಸಿ ಪರಿಷ್ಕರಿಸಿರುವುದರಿಂದ ಮೇಲ್ಛಾವಣಿ ಸೌರ ಘಟಕಗಳಿಗೆ ನೊಂದಣಿ ಕೋರಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸ್ವೀಕೃತಿ ಆಗಿರುವ/ಆಗುತ್ತಿರುವ ಅರ್ಜಿಗಳನ್ನು ಈ ಕೆಳಕಂಡ ಮಾರ್ಗಸೂಚಿಗಳನ್ವಯ ಪರಿಷ್ಕರಿಸಿ ಒಡಂಬಡಿಕೆ ಮಾಡಿಕೊಳ್ಳಲು ಸೂಚಿಸಿ ಆದೇಶಿಸಲಾಗಿದೆ.

**ಮಾರ್ಗಸೂಚಿಗಳು:**

I. ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ವಿದ್ಯುತ್ ಉತ್ಪಾದನೆಗೆ ನಿವ್ವಳ ಮಾಪನ ವ್ಯವಸ್ಥೆಯಡಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರು ನಿಗದಿ ಪಡಿಸಿರುವ ವಿದ್ಯುತ್ ದರವನ್ನು ಪಾವತಿಸಲಾಗುತ್ತದೆ.

II. ಗೃಹಬಳಕೆ ವಿದ್ಯುತ್ ಸ್ಥಾವರಗಳ ಕಟ್ಟಡಗಳನ್ನು ಹೊರತು ಪಡಿಸಿ, ಈಗಾಗಲೇ ಒಡಂಬಡಿಕೆ ಮಾಡಿಕೊಂಡಿರುವ ಮತ್ತು ಮುಂದೆ ಒಡಂಬಡಿಕೆ ಮಾಡಿಕೊಳ್ಳುವ, ಎಲ್ಲಾ ವಿದ್ಯುತ್ ಸ್ಥಾವರಗಳ ಕಟ್ಟಡಗಳ ಎತ್ತರ ಕಡ್ಡಾಯವಾಗಿ 10 ಅಡಿಗಿಂತ ಕಡಿಮೆಯಾಗಿರಬಾರದು ಮತ್ತು ಗೃಹಬಳಕೆ ವಿದ್ಯುತ್ ಸ್ಥಾವರಗಳನ್ನೊಳಗೊಂಡಂತೆ, ಎಲ್ಲಾ ವಿದ್ಯುತ್ ಸ್ಥಾವರಗಳ ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರ ಘಟಕಗಳ ಪಿ.ವಿ ಸೌರ ಫಲಕಗಳು ಕಡ್ಡಾಯವಾಗಿ ಕಟ್ಟಡಗಳ ಮೇಲ್ಛಾವಣಿಯ ಮೇಲೆಯೇ ಅಳವಡಿಸಿಕೊಳ್ಳಬೇಕು.

III. ನೆಟ್‌ಮೀಟರಿಂಗ್ ವ್ಯವಸ್ಥೆಯಡಿ, ಇನ್ನು ಮುಂದೆ ಒಡಂಬಡಿಕೆ ಮಾಡಿಕೊಳ್ಳುವ ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕಗಳ ಸಾಮರ್ಥ್ಯವು, ಅರ್ಜಿದಾರರು ತಮ್ಮ ಸ್ಥಾವರಕ್ಕೆ ಪಡೆದುಕೊಂಡಿರುವ ವಿದ್ಯುತ್ ಮಂಜೂರಾತಿ ಹೊರೆಯ ಸಾಮರ್ಥ್ಯ ಮೀರದಂತೆ (limited to sanctioned load), ಮೇಲ್ಛಾವಣಿ ಸೌರ ವಿದ್ಯುತ್ ಘಟಕಗಳಿಗೆ ಒಡಂಬಡಿಕೆ ಮಾಡಿಕೊಳ್ಳುವುದು.

IV. ಸರ್ಕಾರದ ಸುತ್ತೋಲೆ ಸಂಖ್ಯೆ: ಇಎನ್ 70 ವಿಎಸ್‌ಸಿ 2015 ದಿನಾಂಕ:10.12.2015 ಅನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 70 ವಿಎಸ್‌ಸಿ 2015 ದಿನಾಂಕ:22.03.2016 ರಲ್ಲಿ ಹಿಂಪಡೆದಿರುವುದನ್ನು ಈ ಮೂಲಕ ಸ್ಥಿರೀಕರಿಸಲಾಗಿದೆ.

V. ಈ ಆದೇಶವು ಕೆ.ಇ.ಆರ್.ಸಿರವರು ಹೊಡಿಸುವ ಆದೇಶ/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ಎ.ಚಿಪ್ಪರ್‌ಬಂದ್)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ.

ಪ್ರತಿ:-

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿ., ಮತ್ತು CMD, ಪಿಸಿಕೆಎಲ್ ಕಾವೇರಿ ಭವನ, ಬೆಂಗಳೂರು-560 009.
4. ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಸಿ.ಎಲ್, ಶಕ್ತಿ ಭವನ, ರೇಸ್ ಕೋರ್ಸ ರಸ್ತೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಸೆಸ್ಕ್, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ ಮತ್ತು ಹುಕ್ಕೇರಿ.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, #39, ಶಾಂತಿ ಗೃಹ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕಟ್ಟಡ, ಅರಮನೆ ರಸ್ತೆ, ಬಂಗಳೂರು-01.
7. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುಚಕ್ತಿ ನಿಯಂತ್ರಣ ಆಯೋಗ, ಎಂ.ಜಿ. ರಸ್ತೆ, ಬೆಂಗಳೂರು.
8. ವಿಶೇಷಾಧಿಕಾರಿ (ಸುಧಾರಣೆ)/ ಕಾರ್ಯಪಾಲಕ ಅಭಿಯಂತರರು (ಯೋಜನೆ/ಇ.ಎಂ.ಸಿ.-1,2 & 3), ಇಂಧನ ಇಲಾಖೆ.
9. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
12. ಶಾಖಾ ರಕ್ಷಾ ಕಡತ/ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.